ಕಾತ್ಯಾಯಿನಿ ಮಾತಾ, ಸಚೀ ದೇವಿ, ಅಭಿರಾಮಿ ಮಾಯಿ, ಹೇಮಕೇಶಿ ಶಿರೋಮಣಿ ಅನುಭೂತಿ ದೇವಿ– ಹೀಗೆ ನೂರೆಂಟು ಸಾಧ್ವಿಗಳು. ಒಬ್ಬೊಬ್ಬರ ಭೇಟಿ ಒಂದೊಂದು ವಿಭಿನ್ನ ಅನುಭವ. ಜಪಾನಿನ ಯೋಗಮಾತಾ ಕಿಯೋಕೋ ಅಕೀವಾ ಅನ್ನುವ ಸಾಧ್ವಿಯೊಬ್ಬರು ದೀಕ್ಷೆ ತೊಟ್ಟು ಹಿಂದೂ ಧರ್ಮದ ಅನುಯಾಯಿಯಾಗಿದ್ದು 'ವರ್ಲ್ಡ್ ಪೀಸ್ ಕ್ಯಾಂಪೇನ್ ಕ್ಯಾಂಪ್' ಹಾಕಿದ್ದರು. ಅವರ ಭೇಟಿಯಾಗಲಿಲ್ಲ. ಆಕೆ 'ವಿಮೆನ್ ಪವರ್' ಎನ್ನುವ ಪ್ರವಚನದಲ್ಲಿ ಸಿದ್ಧಹಸ್ತೆಯಂತೆ. ಹೆಣ್ಣು ಭ್ರೂಣ ಹತ್ಯೆ ನಿಷೇಧದಿಂದ ಹಿಡಿದು ಮಹಿಳೆಯರು ಸಂಘಟಿತರಾಗೋದರ ಅವಶ್ಯಕತೆಯವರೆಗೂ ಆಕೆಯ ಕಿವಿಮಾತು, ಬುದ್ಧಿವಾದ ನಿತ್ಯವೂ ಇಲ್ಲಿ ಸಿಗುತ್ತೆ ಅಂತ.

ಸಾಧ್ವಿಯರು ಮತ್ತು ಪ್ರವಚನಕಾರರಲ್ಲಿ ಅವಿವಾಹಿತ ಯುವ ಮಹಿಳೆಯರದ್ದೇ ಬಹುಪಾಲು. ಹಾಗಿದ್ದವರಲ್ಲಿ ನನ್ನೊಡನೆ ಮಾತಿಗೆ ಸಿಕ್ಕವರು ಮಹಾರಾಷ್ಟ್ರದಿಂದ ಬಂದಿದ್ದ ಮೃಣಾಲಿನಿ ಆಯಿಯವರು. ತಮ್ಮ ಕುಟುಂಬದೊಂದಿಗೇ ಇದ್ದುಕೊಂಡು ತಾವು ನಂಬಿದ ಗುರುಗಳ ಆಶ್ರಮದೊಂದಿಗೆ ಗುರುತಿಸಿಕೊಂಡು ಅಲ್ಲಿಯೇ ಸೇವೆಯನ್ನು ಮಾಡುತ್ತಾ ಕಳೆದ ಹದಿನಾಲ್ಕು ವರ್ಷಗಳಿಂದ ಪ್ರವಚನ





ನೀಡುತ್ತಿದ್ದರವರು. ಕಾವಿಯನ್ನು ಸ್ವಇಚ್ಛೆಯಿಂದ ಸ್ವೀಕರಿಸಿದ್ದರವರು. ಕೆಲವರು ವ್ಯಾಸಪೀಠದಲ್ಲಿ ಇರುವವರೆಗಷ್ಟೇ ಕಾವಿಧಾರಿಗಳು. ಉಳಿದಂತೆ ಪಕ್ಕಾ ಸಂಸಾರಸ್ಥರು. ಕೆಲವರಂತೂ ಸಕಲವನ್ನೂ ತೊರೆದು ಆಶ್ರಮಗಳಲ್ಲೇ ನೆಲೆಸಿ ದೊಡ್ಡ ಗುರುಗಳ, ಸ್ವಾಮಿಗಳ ಸೇವೆಗೆ ಸಂಪೂರ್ಣ ಜೀವನ ಮೀಸಲಿಟ್ಟವರು.

ಬೆರಳೆಣಿಕೆಯಷ್ಟು ಮಹಿಳೆಯರು ತಮ್ಮದೇ ಆಶ್ರಮ ಕಟ್ಟಿಕೊಂಡು, ವಿದೇಶೀ ಭಕ್ತರನ್ನೂ ಆಕರ್ಷಿಸುವಷ್ಟರ ಮಟ್ಟಿಗೆ ಬೆಳೆದು ಜನ ಸೇವೆ ಮಾಡುತ್ತಿದ್ದಾರೆ. ಇನ್ನೂ ಕೆಲವರು ನಿರ್ಗತಿಕರಾಗಿ ಅನಿವಾರ್ಯತೆಯಿಂದ ಸನ್ಯಾಸಿನಿಯರಾಗಿದ್ದಾರೆ. ನಿರ್ಗತಿಕ, ದಿಕ್ಕು ತಪ್ಪಿದ ವಿದೇಶೀ ಮಹಿಳೆಯರೂ ಇಲ್ಲಿ ಬಂದು ದೀಕ್ಷೆ ತೊಟ್ಟು ಸನ್ಯಾಸಿನಿಯರಾಗಿದ್ದರು. ಲಕ್ಷಾಂತರ ಸಾಧು ಸಾಧ್ವಿಗಳ ಈ ಮೇಳದಲ್ಲಿ ನಿಜವಾದ ಸಾಧ್ವಿಗಳು ಯಾರು, ಢೋಂಗಿಗಳು ಯಾರು ಅನ್ನುವುದನ್ನು ಗುರುತಿಸುವುದು ಒಂದು ದೊಡ್ಡ ಸವಾಲಂತೂ ಹೌದು.

### ಜೈ ಬೋಲೇನಾಥ್

ಮೃಣಾಲಿನಿ ಆಯಿಯವರೊಡನೆ ಮಾತು ಮುಗಿಸಿ ಹೊರಬರುತ್ತಿದ್ದಂತೆಯೇ, ಏಕ್‌ದಂ 'ಜೈ ಭೋಲೇನಾಥ್ ಜೈ ಭೋಲೇನಾಥ್' ಎನ್ನುವ ಕೂಗಿನೊಂದಿಗೆ 'ಜಾಗ ಬಿಡಿ, ಜಾಗ ಬಿಡಿ' ಎನ್ನುವ ಕೂಗೂ ಕೇಳಿಸಿತು. ಆ ದಿಕ್ಕಿಗೆ ತಿರುಗಿದರೆ ಒಂದಿಪ್ಪತ್ತೈದು ಮೂವತ್ತು ತಲೆ ಬೋಳಿಸಿಕೊಂಡ, ರವಿಕೆಯಿಲ್ಲದೆ ಬಿಳಿಸೀರೆಯುಟ್ಟ ಐವತ್ತು ದಾಟಿದ ಹೆಂಗಸರು ಕೈಯಲ್ಲಿ ಕೇಸರಿ ತ್ರಿಕೋನ ಬಟ್ಟೆ ಕಟ್ಟಿದ ದಂಡ ಹಿಡಿದು ಸಾಲಾಗಿ ಬರುತ್ತಿದ್ದರು. ಅವರ ಗುಂಪನ್ನು ಕಾಯಲು ಒಂದಷ್ಟು ಕೇಸರಿಧಾರಿ ಪುರುಷರಿದ್ದರು. ಜತೆಗೆ ಇಬ್ಬರು ಹುಲಿ ಚರ್ಮ ಹೊದ್ದ ಬಾಬಾಗಳು.

ಯಾಕೋ ಆ ಹೆಂಗಸರ ಮುಖದಲ್ಲಿ ಸನ್ಯಾಸಿನಿಯರ ವೈರಾಗ್ಯ, ಸಾಧ್ವಿಯರ ಪ್ರಖರತೆ ಯಾವುದೂ ಕಾಣಲಿಲ್ಲ. ಬಲವಂತದ ಮಾಘ ಸ್ನಾನದ ಭಾವವಿತ್ತು. ಇಲ್ಲಿನ ಸಾಧುವೊಬ್ಬರ ಪ್ರಕಾರ 'ನಿರ್ಗತಿಕ ಮಹಿಳೆಯರಿಗೆ ದೀಕ್ಷೆ ನೀಡಲಾಗಿದೆ'.

ಎರಡು ಹೆಜ್ಜೆ ಮುಂದೆ ಹೋಗಿ ಫೋಟೊ ತೆಗೆದೆ. ಅಷ್ಟರಲ್ಲಿ ಹುಲಿಚರ್ಮಧಾರಿಯೊಬ್ಬ ಬಾಯಿಗೆ ಬಂದಂತೆ ನನ್ನನ್ನು ಬೈದ. ನನಗೆ ಉತ್ತರಿಸಿದ್ದ ಸಾಧುವೂ ಅದೇ ಗುಂಪಿನಲ್ಲಿ ನುಸುಳುತ್ತಿದ್ದ. 'ನಿರ್ಗತಿಕ ಗಂಡಸರಿಗೂ ಹೀಗೇ ದೀಕ್ಷೆ ಕೊಡುತ್ತೀರಾ?' ಎಂದು ಆ ಸಾಧುವನ್ನೇ ಕೇಳಿದೆ. ಆತ ನನ್ನ ಕಣ್ಣಲ್ಲಿ ಕಣ್ಣಿಟ್ಟು 'ಜೈ ಭೋಲೇನಾಥ್' ಎನ್ನುತ್ತಾ ಗುಂಪಿನಲ್ಲಿ ಸೇರಿಹೋದ.

'ಮನೆಗೆ ಹೊರೆ ಎನ್ನಿಸಿದ ಹಿರಿ ಜೀವಗಳನ್ನು, ಗಂಡ ತೀರಿಕೊಂಡ ಹೆಣ್ಣು ಮಕ್ಕಳನ್ನು ಇಲ್ಲಿ ತಂದು ಬಿಟ್ಟು ಹೋಗುತ್ತಾರಂತೆ, ನಿಜವೇ?' ಎಂದು ಅಲ್ಲಿ ಓಡಾಡುತ್ತಿದ್ದ ಸ್ವಯಂಸೇವಕರನ್ನು, ಸಾಧುಗಳನ್ನು ಪ್ರಶ್ನಿಸಿದೆ. ಕೆಲವರು ಹೂಂ ಎಂದರು. ಮತ್ತೆ ಕೆಲವರು ಇಲ್ಲ ಅಂದರು. ಸೀದಾ ಪೊಲೀಸ್ ಕಂಟ್ರೋಲ್ ರೂಮಿಗೆ ಹೋದೆ. ಒಂದು, ಎರಡು, ಮೂರು– ಹೀಗೆ ವಿಧ ವಿಧ ಸ್ಟಾರ್ ಸ್ತರಗಳ ಪೊಲೀಸರು ಅಲ್ಲಿದ್ದರು. ಎಲ್ಲರನ್ನೂ ಇದೇ ಪ್ರಶ್ನೆ ಕೇಳಿದೆ. ಕಡೆಗೂ ಒಬ್ಬ ಪೋಲಿಸ್ ಅಧಿಕಾರಿ ಹೇಳಿದ್ದು– '8 ಕುಂಭಮೇಳಗಳನ್ನು ಕಂಡಿದ್ದೇನೆ. ಮೊದಲು ಇಂತಹ ಸಮಸ್ಯೆ ಹೆಚ್ಚಿರುತ್ತಿತ್ತು. ಈಗ ಸಾಕಷ್ಟು ಕಡಿಮೆಯಾಗಿದೆ.'

'ಹಿಂದೆಲ್ಲಾ ಹೀಗೆ ನಿರ್ಗತಿಕರಾಗುವವರನ್ನು ಇಲ್ಲಿ ಡೇರಾ ಹಾಕಿರುವ ಸ್ವಾಮಿಗಳು ತಮ್ಮ ತಮ್ಮ ಆಶ್ರಮಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಆದರೆ ಈಗ ಹಾಗಲ್ಲ, ಎಲ್ಲರ ನೋಂದಾವಣೆ ಆಗುತ್ತದೆ. ಸರ್ಕಾರ ಗುರುತಿಸಿರುವ ಆಶ್ರಮಗಳಲ್ಲಿ ಅವರಿಗೆ ಏರ್ಪಾಡು ಮಾಡಲಾಗುತ್ತದೆ. ಕೆಲವರು ವಾರಣಾಸಿಯ ಮುಮುಕ್ಷು ಭವನಕ್ಕೇ ಹೋಗಿಬಿಡುತ್ತಾರೆ' ಎಂದೂ ಆತ ಮಾತು ಸೇರಿಸಿದ.

ಕುಂಭಮೇಳದಲ್ಲಿ ಸೇರಿದ ನಾರೀಲೋಕದ ನೂರೆಂಟು ತಲ್ಲಣಗಳ ಬಗ್ಗೆ ಹೆಚ್ಚು ವಿಷಯಗಳು ಗೊತ್ತಾಗಲಿಲ್ಲ. ಆದರೆ ಈ ಸಾಧ್ವಿಗಳು ತಮ್ಮ ಪ್ರವಚನಗಳಿಂದ ಎಲ್ಲರನ್ನೂ ತಮ್ಮತ್ತ ಸೆಳೆಯುತ್ತಿದ್ದುದು ಮಾತ್ರ ನಿಜವಿತ್ತು. ಅವರ ಪ್ರವಚನಗಳ ಹಿಂದೆ ಅವರದ್ದೇ ಆದ ಅನುಭವಲೋಕವಿತ್ತು. ಆದರೆ ಆಧ್ಯಾತ್ಮ ಜಗತ್ತಿನ ಬಗ್ಗೆ ಇವರಲ್ಲಿ ಎಷ್ಟು ಮಂದಿಯದ್ದು ನೈಜ ಕುತೂಹಲ ಎನ್ನುವುದು ಗೊತ್ತಾಗಲೇ ಇಲ್ಲ. ■